# ಹುಡುಗಾಟ

★ ಆರೆಚ್ ಹಾಲಾಡಿ



ಈಶ್ವರ ಬಡಿಗೇರ

ಪ್ರತಿಮಾಳಿಗೆ ಸೂರ್ಯಾ ಅಂದರೆ ತುಂಬಾ ಇಷ್ಟ. ಬಾಲ್ಯದಿಂದಲೂ ಅಕ್ಕಪಕ್ಕದ ಮನೆಗಳಲ್ಲೇ ಇದ್ದ ಕಾರಣ ಒಟ್ಟಿಗೇ ಆಟ ಪಾಠ ನಡೆದಿತ್ತು. ದೊಡ್ಡೋರಾಗುತ್ತಿದ್ದ ಹಾಗೆ ಒಂದೇ ಶಾಲೆ, ಒಂದೇ ಕಾಲೇಜಿನಲ್ಲಿ ಓದು ಮುಂದುವರೆದಿತ್ತು. ಅವನು ವಿಜ್ಞಾನದಲ್ಲಿ ಓದು ಮುಂದುವರೆಸಿದರೆ ಇವಳು ಕಲಾ ವಿಭಾಗಕ್ಕೆ ಸೀಮಿತವಾದಳು. ಈಗಂತೂ ಅವನು ಓದು ಮುಗಿಸಿ ವಿಜ್ಞಾನಿಯೇ ಆದ. ಊರಿನಲ್ಲೇ ಇದ್ದ ರಿಸರ್ಚ್ ಸೆಂಟರ್ ನಲ್ಲಿ ಕೆಲಸ. ಅವನದ್ದೇ ಒಂದು ಸ್ವಂತ ಪ್ರಯೋಗಾಲಯ ಬೇರೆ ಮನೆಯ ಮಾಳಿಗೆಯಲ್ಲೇ ಮಾಡಿಕೊಂಡಿದ್ದ. ಇವಳು ಓದಿಗೆ ಸರಿಯಾದ ಒಂದು ನೌಕರಿ ಹಿಡಿದಳು. ಅದೂ ಮನೆಯ ಹತ್ತಿರದಲ್ಲೇ ಇರುವ ಕಚೇರಿಯೊಂದರಲ್ಲಿ. ಕೆಲಸ ಮುಗಿಸಿ ಬಂದವಳು ಅವನ ಪ್ರಯೋಗಾಲಯಕ್ಕೆ ಓಡಿ ಭೇಟಿ ಮಾಡದ ದಿನವೇ ಇಲ್ಲ ....ಯಾಕೆಂದರೆ ಅವಳ ಪ್ರೀತಿ ಅದಾಗಲೇ ಪ್ರೇಮವಾಗಿ ರೂಪಾಂತರಗೊಂಡು ಬಹಳ ಸಮಯ ಕಳೆದಿತ್ತು. ಆದರೆ ಸೂರ್ಯನಿಗೆ ಪ್ರೇಮದ ಭಾಷೆಯೇ ಅರ್ಥವಾಗುತ್ತಿಲ್ಲ!

* * *

ಪ್ರತಿಮಾ ಕರೆದಿದ್ದಾಳೆಂದು ಆ ಹೋಟೆಲ್ಲಿಗೆ ಸರಿಯಾದ ಸಮಯಕ್ಕೆ ಸೂರ್ಯ ಹೋದ. 'ಇವನು ನನ್ನ ಸಹೋದ್ಯೋಗಿ ರಜತ ಕುಮಾರ ... ಮಿಸ್ಟರ್ ರಜತ್ ... ಇವನೇ ಸೂರ್ಯ ..ನನ್ನ ಬಾಲ್ಯದ ಒಡನಾಡಿ' ಎಂಧು ಪರಿಚಯ ಮಾಡಿಸಿದಳು. ಕೈಕುಲುಕುವಿಕೆ ಮುಗಿದು, ಉಭಯ ಕುಶಲೋಪರಿ ನಡೆದು, ಹೊಟ್ಟೆ ಬಿರಿವಷ್ಟು ತಿಂದಾಯ್ತು. ರಜತನೇ ಮೊದಲು ಮುಗಿಸಿ ಕೈತೊಳೆಯಲು ಎದ್ದು ಹೋದ. ಸೂರ್ಯ ಅಂದ, 'ಪ್ರತಿಮಾ, ರಜತ ಚೆನ್ನಾಗಿದ್ದಾನೆ. ನಿನಗೊಳ್ಳೇ ಜೋಡಿಯಾಗುವುದು ಖಂಡಿತ!'

ಸಿಟ್ಟೇ ಬಂದಿತವಳಿಗೆ. ಬೇರೆಯವನ ಜೊತೆಯಲ್ಲಿ ಇದ್ದಿದ್ದು ನೋಡಿ ಹೊಟ್ಟೆಯುರಿದುಕೊಳ್ಳಲಿ, ಹಾಗಾದರೂ ಪ್ರೀತಿ ತೋಡಿಕೊಳ್ಳಲಿ ಅಂದುಕೊಂಡರೆ ತನ್ನ ಹೊಟ್ಟೆಯನ್ನೇ ಉರಿಸುತ್ತಿದ್ದಾನೆ. ....ತಾನೂ ತಟ್ಟನೆದ್ದು ಕೈ ತೊಳೆದು ಇವನನ್ನಲ್ಲೇ ಬಿಟ್ಟು ರಜತನೊಂದಿಗೆ ಹೊರಟೇ ಹೋದಳು ...ಮಿಕಿಮಿಕಿ ನೋಡುತ್ತಾ ಕುಳಿತ ಸೂರ್ಯ!

ಎಂದಿನಂತೆ ಅಂದೂ ಸೂರ್ಯನ ಲ್ಯಾಬ್ ಗೆ ಬಂದಳು ಪ್ರತಿಮಾ. 'ನಿನಗೆ ಯಾರಾದರೂ ಮಂತ್ರವಾದಿ ಗೊತ್ತಾ?' ಕೇಳಿದಳು ಅವನನ್ನೇ ದಿಟ್ಟಿಸುತ್ತಾ.

'ಇಲ್ಲವಲ್ಲಾ ...ಮಂತ್ರವಾದಿ ನಿನಗೆ ಯಾಕೆ ಬೇಕು ಹೇಳು?'

'ಅದಾ ....ನಾನೊಬ್ಬನ್ನ ಪ್ರೀತಿಸ್ತಿದ್ದೀನಿ ..ಅವನು ಮಾತ್ರ ಗುಮ್ಮನ ಹಾಗೆ ಇದ್ದಾನೆ. ಏನೂ ಹೇಳ್ತಾನೆ ಇಲ್ಲ. ನನ್ನ ಮೇಲೆ ಅವನಿಗೆ ಪ್ರೀತಿ ಉಂಟಾ ಇಲ್ವಾ ಗೊತ್ತಾಗ್ತಿಲ್ಲ. ಅದಕ್ಕೇ ಅವನನ್ನ ವಶೀಕರಣ ಮಾಡಿಕೊಳ್ಳಬೇಕಲ್ಲ ..ಯಂತ್ರ ತಂತ್ರ ಮಂತ್ರ ಪ್ರಯೋಗ ಮಾಡೋಣಾಂತ' ದೃಷ್ಟಿ ಕದಲಿಸದೇ ಹೇಳಿದಳು.

'ಹಾಗಾ? ಯಾರನ್ನು? ರಜತಕುಮಾರನನ್ನಾ?'

ಕಪಾಳಕ್ಕೆ ಹೊಡೆದೇ  ಬಿಡುವಷ್ಟು ಕೋಪ ಬಂತವಳಿಗೆ. ಮಾತನಾಡದೆ ಬಿರಬಿರನೆ ಹೊರಟು ಹೋದಳು. ಅವಳು ಹೋದೆಡೆಗೆ ನೋಡುತ್ತಿದ್ದವನಿಗೆ ಏನೋ ಹೊಳೆದಂತಾಯ್ತು. ಹೌದು ಅದೇ ಸರಿ ಅಂದುಕೊಳ್ಳುತ್ತಾ ಸೀದಾ ಲೈಬ್ರರಿಗೆ ಹೋದ. ಮನಃಶಾಸ್ತ್ರದ ಪುಸ್ತಕ, ವೈದ್ಯ ಶಾಸ್ತ್ರದ ಪುಸ್ತಕಗಳನ್ನು ಹರವಿಕೊಂಡ. ಪ್ರತಿಮಾ ಬರುತ್ತಿದ್ದಂತೆ ಸೂರ್ಯ ಖುಷಿಯಿಂದ ಹೇಳಿದ,'ನೋಡೇ ...ನಿನಗೋಸ್ಕರ ಈಗ ಹದಿನೈದು ದಿನದಿಂದ ಹಗಲು ರಾತ್ರಿ ಪ್ರಯತ್ನ ಪಟ್ಟು ಒಂದು ಹೊಸಾ ದ್ರಾವಣ ತಯಾರು ಮಾಡಿದ್ದೇನೆ. ಇಲ್ಲಿ ಟೇಬಲ್ ಮೇಲೆ ಇದೆಯಲ್ಲಾ, ಈ ಪುಟ್ಟ ಬಾಟ್ಲಿಯಲ್ಲಿ ಕಾಫಿ ಕಲರ್ ನಲ್ಲಿದೆಯಲ್ಲಾ ಇದೇ. ಮನೋ ವಿಜ್ಞಾನ, ವೈದ್ಯ ವಿಜ್ಞಾನದ ಎಷ್ಟೊಂದು ಪುಸ್ತಕ ರೆಫರ್ ಮಾಡಿದೆ ಗೊತ್ತಾ? ಇದನ್ನು ಕುಡಿಸಿದೆ ಎಂದರೆ ಕುಡಿದವನ ಮಾನಸಿಕ ಸಂತುಲನ ವ್ಯತ್ಯಾಸವಾಗುತ್ತೆ. ನೀನು ಮಾಡಬೇಕಾದುದು ಏನೆಂದರೆ ಕುಡಿಸಿದ ಹತ್ತು ನಿಮಿಷದಲ್ಲೇ ಕೆಲವು ಆಜ್ಞೆಗಳನ್ನು ಕೊಡುವುದು. ಮುಂದೆ ಅವನು ಆ ಆಜ್ಞೆಗಳನ್ನು ಪಾಲಿಸುತ್ತಿರುತ್ತಾನೆ. ಒಂತರಾ ಬ್ರೈನ್ ವಾಷ್ ಅಂತಾರಲ್ಲಾ ಹಾಗಾಗುತ್ತೆ.'

'ಹೌದಾ? ವೆರಿಗುಡ್. ಕೂತಿರು,  ನಿನ್ನ ಕಿಚನ್ ನಲ್ಲೇ ನಿನಗೊಂದು ಕಾಫಿ ಮಾಡಿ ತರ್ತೀನಿ'

'ಏಯ್ ನಿಲ್ಲೇ  ..ಇನ್ನೂ ಹೇಳೋದಿದೆ. ಅದರ ಕೆಲಸ ಪೂರ್ತಿಯಾಗಿಲ್ಲ'

ಈತ ಕೂಗುತ್ತಿದ್ದರೂ ಕೇಳಿಸಿಕೊಳ್ಳಲಿಲ್ಲ ಆಕೆ. 'ಆದರೆ ಅಬ್ಬಾ...ಇಷ್ಟು ದಿನಕ್ಕೆ ಇವಳ ಮೊಗದಲ್ಲಿ ಸಂತೋಷ ಕಂಡ ಹಾಗಾಯ್ತು' ಅವಳು ಬರೋದನ್ನೇ ಕಾದ. ಆದರೆ ಅವಳು ಆ ಪುಟ್ಟ ಬಾಟಲಿ ಕೊಂಡೊಯ್ದದ್ದು ಆತ ನೋಡಲೇ ಇಲ್ಲ! ಕಾಫಿ ಕುಡಿಯುತ್ತಾ ಸೂರ್ಯ ಹೇಳಿದ, 'ನೋಡೇ ಆ ದ್ರಾವಣ ಇನ್ನೂ ಪರೀಕ್ಷೆಗೆ ಒಳಪಡಿಸಲಿದೆ. ಅದರ ಪರಿಣಾಮ ಕಂಡುಕೊಂಡಿಲ್ಲ. ಯಾವುದಾದರೂ ಸಾಕು ಪ್ರಾಣಿಗೆ ಹಾಕಿ ಏನಾಗುತ್ತೆ, ಅಡ್ಡ ಪರಿಣಾಮ ಏನು,ಇದೆಲ್ಲ ನೋಡಿ ನಿನ್ನ ಕೈಗೆ ಕೊಡ್ತೀನಿ. ಆಮೇಲೆ ರಜತ ಕುಮಾರನಿಗೆ ಕುಡಿಸಿ ಬಿಡು. ನಿನ್ನ ಕೈವಶವಾಗಿ ನೀ ಹೇಳಿದ ಹಾಗೆ ಕೇಳಿಕೊಂಡು ಇರ್ತಾನೆ. ಹ್ಹಹ್ಹಾ'.

ಪ್ರತಿಮಾಳಿಗೆ ಶಾಕ್ ಹೊಡೆದ ಹಾಗಾಯ್ತು. ದ್ರಾವಣ ಪರೀಕ್ಷೆ ಮಾಡುವುದೆಲ್ಲಿಂದ? ಅದಾಗಲೇ ಕಾಫಿ ಜೊತೆ ಸೂರ್ಯನ ಹೊಟ್ಟೆ ಸೇರಿಯಾಗಿತ್ತಲ್ಲ. 'ಅಯ್ಯೋ ..ಸೂರ್ಯಾ ..ಯಾಕೋ ಮೊದಲೇ ಹೇಳಲಿಲ್ಲ? ನಾನೆಂಥ ಕೆಲಸ ಮಾಡಿದೆ ..ಮಾತಾಡು ಸೂರ್ಯ ..ನೀ ಕುಡಿದದ್ದು ವಾಂತಿ ಮಾಡಿಸೋದು ಹೇಗೆ ..ಅದಕ್ಕೆ ಆ್ಯಂಟಿ ಡೋಸ್ ಮಾಡಿಟ್ಟಿದ್ದೀಯಾ.. ತಿರುಗಿ ಗುಣವಾಗೋದು ಹೇಗೆ?'

ಕೂಗುತ್ತಲೇ ಇದ್ದಳು! ಸೂರ್ಯ ಕೈವಶವಾದನೋ ಇಲ್ಲವೋ ಗೊತ್ತಿಲ್ಲ. ಆದರೆ ದ್ರಾವಣದ ಅಡ್ಡ ಪರಿಣಾಮ ಆಗಿದ್ದಂತೂ ಸತ್ಯ! ಹುಡುಗಾಟ ಅನರ್ಥವಾಗಿತ್ತು. ಸೂರ್ಯನ ಮೆದುಳು ಕೆಲಸ ಮಾಡುವುದನ್ನೇ ನಿಲ್ಲಿಸಿಯಾಗಿತ್ತು !